ದಿನಾಂಕಃ 08/09/2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲು ಃ **3** ನೇ ಪ್ರತಿವಾದಿ ಪರ ಶ್ರೀ ವಾಯ್ ಎಫ್ ಎಸ್ ವಕೀಲರಿಂದ ಃ

10. ನಾನು ನನ್ನ ತಂದೆಗೆ ಬರುವ 1/3 ಹಿಸ್ಸಾದಲ್ಲಿ ನನ್ನ 1/5 ಭಾಗ ಕೇಳಿದ್ದೇನೆ ಎಂದರೆ ಸರಿ. ನನ್ನ ಪ್ರಕಾರ ನನ್ನ ತಂದೆಗೆ 9 ಎಕರೆ ಆಸ್ತಿ ಬರುತ್ತದೆ. ನನ್ನ ತಂದೆ ಹಾಗೂ ಆತನ ಸಹೋದರರಿಗೆ ತಲಾ ಎಲ್ಲರಿಗೂ 9 ಎಕರೆ ಆಸ್ತಿ ಬರುತ್ತದೆ ಎಂದರೆ ಸರಿ. ರಾಜಿ ಡಿಕ್ರಿ ಪ್ರಕಾರ ನನ್ನ ತಂದೆಗೆ 5 ಎಕರೆ ಆಸ್ತಿ ಬರುತ್ತದೆ. ಖರೀದಿ ಕೊಟ್ಟ ಜಮೀನುಗಳನ್ನು ಸೇರಿಸಿ ದಾವಾ ಹಾಕಿದ್ದೇನೆ ಎಂದರೆ ಸರಿ. ಅದನ್ನು ಬಿಟ್ಟರೇ 8 ವರೆ ಎಕರೆ ಬರುತ್ತದೆ. ನನ್ನ ಮದುವೆ ದಿಃ 26-05-2020 ರಲ್ಲಿ ಆಗಿದೆ. 2020 ರಲ್ಲಿ ನನ್ನ ವಿಧ್ಯಾಭ್ಯಾಸ ಮುಗಿದಿರಲಿಲ್ಲ, ಡಿಗ್ರಿ ಓದುತ್ತಿದ್ದೆ. ಹಿರೇನರ್ತಿಯಲ್ಲಿ ಬಸ್ಸಿನ ಸೌಕರ್ಯ ಇಲ್ಲದ ಕಾರಣ ನಮಗೆ ಶಾಲೆ ಕಲಿಸುವ ಸಂಬಂಧ ನನ್ನ ತಂದೆ ಕುಂದಗೋಳದಲ್ಲಿ ಬಾಡಿಗೆ ಮನೆ ಮಾಡಿದ್ದರು ಎಂದರೆ ಸರಿಯಲ್ಲ. ನನ್ನ ತಂದೆ ಹಾಗೂ ದೊಡ್ಡಪ್ಪಂದಿರೂ ಕೂಡಿ ಇದ್ದಾಗ ನನ್ನ ಮದುವೆ ಮಾಡಿದ್ದಾರೆ ಎಂದರೆ ಸರಿಯಲ್ಲ. ನಾನು ನನ್ನ ಮದುವೆ ನಂತರ ವಿಧ್ಯಾಭ್ಯಾಸದ ಸಂಬಂಧ ನಿಮ್ಮ ತಂದೆ ಮನೆಯಲ್ಲ್ಕಿ ಎಷ್ಟು ವರ್ಷ ಇದ್ದೀರಿ ಎಂದರೆ ಸಾಕ್ಷಿ ಇರಲಿಲ್ಲ. ನನ್ನ ಮದುವೆಯ ನಂತರ ಗಂಡನ ಮನೆಗೆ ಹೋಗಿದ್ದೆ.

11. ನನ್ನ ತಂದೆ ಹಾಗೂ ದೊಡ್ಡಪ್ಪ ಪ್ರತ್ಯೇಕವಾಗಿ ವಾಸ ಮಾಡುತ್ತಿದ್ದಾರೆ ಎಂದರೆ ಸರಿ. ರಾಜಿ ಡಿಕ್ರಿ ಪ್ರಕಾರ ನನ್ನ ತಂದೆ ಹಾಗೂ ಆತನ ಸಹೋದರರು ಬೇರೆ ಬೇರೆಯಾಗಿ ಅವರ ಪಾಲಿಗೆ ಬಂದ ಆಸ್ತಿಗಳ ಸಾಗುವಳಿ ಮಾಡುತ್ತಾ ಪ್ರತ್ಯೇಕವಾಗಿ ವಾಸ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ನನ್ನ ಇಬ್ಬರೂ ಸಹೋದರಿಯರು ನೌಕರಿಯಲ್ಲಿದ್ದಾರೆ ಎಂದರೆ ಸರಿ. ನನ್ನ ತಾಯಿಗೆ ಓದಲು ಮತ್ತು ಬರೆಯಲು ಬರುತ್ತದೆ ಎಂದರೆ ಸರಿ. ಮನೆತನದ ವಿಚಾರವನ್ನು ನನ್ನ ತಾಯಿ ಹೇಳುತ್ತಿದ್ದರು ಎಂದರೆ ಸಾಕ್ಷಿ ಕೆಲವೊಂದು ಹೇಳುತ್ತಿದ್ದರು, ಕೆಲವೊಂದು ಹೇಳುತ್ತಿರಲಿಲ್ಲ. ಈಗಲೂ ನನ್ನ ತಾಯಿ, ತಂದೆ ಹಾಗೂ ಸಹೋದರಿಯರು ಒಟ್ಟಿಗೆ ವಾಸವಿದ್ದಾರೆ ಎಂದರೆ ಸರಿ. ಒಟ್ಟು ಕುಟುಂಬದ ಇದ್ದಾಗ ಮನೆತನದ ಹಿರಿತನವನ್ನು ನನ್ನ ದೊಡ್ಡಪ್ಪ ಮಾಡುತ್ತಿದ್ದರು. ಮನೆತನದ ಸಾಲ, ಖರ್ಚು ಹಾಗೂ ವೆಚ್ಚಗಳಿಗೆ ಸಂಬಂಧಪಟ್ಟಂತೆ ದೊಡ್ಡಪ್ಪ ಮನೆಯಲ್ಲಿ ಚರ್ಚೆ ಮಾಡುತ್ತಿದ್ದರು ಎಂದರೆ ಇಲ್ಲ. ನನ್ನ ದೊಡ್ಡಪ್ಪ ಮನೆತನದ ಖರ್ಚು ವೆಚ್ಚದ ಸಂಬಂಧ ತಂದೆ-ತಾಯಿ ಹಾಗೂ ಅವರ ಮಕ್ಕಳೊಂದಿಗೆ ಚರ್ಚೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಈ ಎಲ್ಲ ಮಾಹಿತಿ ನನಗೆ ಇದ್ದರೂ ಅನುಕೂಲಕ್ಕೆ ತಕ್ಕಂತೆ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

12. 4 ರಿಂದ 7 ನೇ ಪ್ರತಿವಾದಿಗಳು ನನ್ನ ಅತ್ತೆ ಮಕ್ಕಳು. ಅವರಿಗೂ ದಾವಾ ಸ್ವತ್ತಿನಲ್ಲಿ 1/3 ಹಿಸ್ಸಾ ಇದೆ ಎಂದರೆ ಸರಿ. ದಾವಾ ಆಸ್ತಿಗಳಲ್ಲಿ ಕೆಲವೊಂದು ಫಲವತ್ತಾಗಿದ್ದು, ಕೆಲವೊಂದು ಬರಡು ಭೂಮಿ ಇದ್ದು, ಅವುಗಳ ಕಿಮ್ಮತ್ತಿನಲ್ಲಿ ವ್ಯತ್ಯಾಸವಿದೆ ಎಂದರೆ ಸರಿ. ಭೂಮಿ ಫಲವತ್ತತೆ ಹಾಗೂ ಭೂಮಿ ಕಿಮ್ಮತ್ತಿಗೆ ಅನುಗುಣವಾಗಿ ಹಿಸ್ಸಾ ಮಾಡುವಾಗ ಹೆಚ್ಚು ಕಡಿಮೆ ಕೆಲವೊಂದು ಆಗುತ್ತದೆ ಎಂದರೆ ಸರಿಯಲ್ಲ. ಫಲವತ್ತತೆ ಹಾಗೂ ಕಿಮ್ಮತ್ತಿಗೆ ಅನುಗುಣವಾಗಿ ನನ್ನ ತಂದೆ, ದೊಡ್ಡಪ್ಪ ಹಾಗೂ ಅತ್ತೆ ಮಕ್ಕಳು ಚರ್ಚೆ ಮಾಡಿ ಸರಿ ಇದೆ. ಅಸಲು ದಾವಾ ನಂಬರ 66/2022 ರಲ್ಲಿ ದಾವಾ ಸ್ವತ್ತುಗಳಲ್ಲಿ ಹಂಚಿಕೆ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ನನ್ನ ಅತ್ತೆ ಮಕ್ಕಳಿಗೆ ಬಂದ ಹಿಸ್ಸಾವನ್ನು 3 ನೇ ಪ್ರತಿವಾದಿ ರೂ. 18 ಲಕ್ಷ ಹಣ ಪಾವತಿ ಮಾಡಿ ಅವರಿಂದ ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಈ ದಾವಾದಲ್ಲಿ ಯಾರೆಲ್ಲ ತಕರಾರನ್ನು ಹಾಕಿದ್ದಾರೆಂಬ ಮಾಹಿತಿ ನಿಮಗೆ ಇದೆಯಾ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. 4 ರಿಂದ 7 ನೇ ಪ್ರತಿವಾದಿಗಳು ತಮ್ಮ ಹಿಸ್ಸಾ ಬಾಬ್ತು ರೂ. 18 ಲಕ್ಷ ಹಣ ಪಡೆದು 3 ನೇ ಪ್ರತಿವಾದಿಗೆ ಬಿಟ್ಟುಕೊಟ್ಟಿದ್ದೆವೆಂದು ತಕರಾರು ಹಾಕಿದ್ದಾರೆ ಎಂದರೆ ಸರಿಯಲ್ಲ. ಈ ಕುರಿತು ನನಗೆ ಮಾಹಿತಿ ಇದ್ದರು ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ಮತ್ತು 3 ನೇ ಪ್ರತಿವಾದಿಗಳು ಮನೆತನದ ಸಾಲ ಮತ್ತು ಅಡಚಣೆ ಸಂಬಂಧ ಸರ್ವೇ ನಂಬರ 159/3 ವಿಸ್ತೀರ್ಣ 2 ಎಕರೆ 18 ಗುಂಟೆ ಸ್ವತ್ತನ್ನು ದಿಃ 26-07-2017 ರಂದು 8 ನೇ ಪ್ರತಿವಾದಿಗೆ ಖರೀದಿ ಕೊಟ್ಟಿದ್ದಾರೆ ಸರಿಯಲ್ಲ. ಸದರಿ ಖರೀದಿ ಪತ್ರಕ್ಕೆ ನನ್ನ ತಾಯಿ ಹಾಗೂ ದೊಡ್ಡಮ್ಮ ಒಪ್ಪಿಗೆ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಖರೀದಿ ಹಾಗೂ ಸಾಲದ ವ್ಯವಹಾರ ನನಗೆ ಗೊತ್ತಿದ್ದರು ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಸಲು ದಾವಾ ನಂಬರ 66/2022 ರಲ್ಲಿ ಆದ ರಾಜಿ ಡಿಕ್ರಿ ಸರಿ ಇದೆ ಎಂದರೆ ಸರಿಯಲ್ಲ. ಸರಿದ ರಾಜಿ ಡಿಕ್ರಿಯಲ್ಲಿ ನನ್ನ ತಂದೆಗೆ ಜಮೀನು ಹಾಗೂ ಮನೆ ಬಂದಿದೆ ಎಂದರೆ ಸರಿಯಲ್ಲ. ಈ ಎಲ್ಲ ವಿಚಾರ ಗೊತ್ತಿದ್ದರು 3 ನೇ ಪ್ರತಿವಾದಿಗೆ ರಾಜಿ ಡಿಕ್ರಿಯಲ್ಲಿ ಹೆಚ್ಚು ಆಸ್ತಿ ಬಂದಿದೆ ಎಂಬ ದುರುದ್ದೇಶದಿಂದ ಪ್ರತಿವಾದಿಗಳಿಗೆ ತೊಂದರೆ ಕೊಡುವ ಸಂಬಂಧ ಸುಳ್ಳು ದಾವಾ ಹಾಕಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**4** ರಿಂದ **8** ನೇ ಪ್ರತಿವಾದಿಗಳ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು**,** ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದಂತೆ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಇದೆ

ಸಹಿ ಆಗಿದೆ

ಹಿರಿಯ ದಿವಾಣಿ ನ್ಯಾಯಾಧೀಶರು,

ಕುಂದಗೋಳ